


## ಬೇಸ್ತು ಬೀಳಿಸಿದ ಸುಧಾ!

ನ. 12ರ 'ಸುಧಾ' ನನ್ನನ್ನು ಬೇಸ್ತು ಬೀಳಿಸಿದಳು. ಐಶ್–ಅಭಿಷೇಕ್ ಸೌಂದರ್ಯ ರಹಸ್ಯ ಎಂಬ ಮೊದಲ ಮುಖಪುಟವನ್ನು ನೋಡಿ ಹೆಚ್ಚಿನ ಸುದ್ದಿಗಾಗಿ ಹಿಂದಿನ ಪುಟದಿಂದ ಹುಡುಕುತ್ತಾ ಬಂದೆ. ನನಗೆ ಸಿಕ್ಕಿದ್ದು ಎರಡನೆ ಮುಖಪುಟ ಹಾಗೂ ಲಕ್ಸ್ ಸೋಪಿನ ಜಾಹಿರಾತು! ಅದೇನೇ ಇರಲಿ ಮುಖಪುಟ ಲೇಖನ ಚಂದ್ರಯಾನದ ಸುತ್ತಮುತ್ತ 2050 ರಲ್ಲಿ ಜಗತ್ತು ಹೇಗಿರುತ್ತದೆ? ಲೇಖನ ಆಸಕ್ತಿದಾಯಕವೂ ಹಾಗೂ ಉಪಯುಕ್ತ ಮಾಹಿತಿಗಳನ್ನು ಒಳಗೊಂಡಿತ್ತು.

–ಪುಷ್ಪಾ ಶ್ರೀರಾಮರಾಜು, ಬೆಂಗಳೂರು

## ಚಂದ್ರಯಾನದ ಸುತ್ತ ಮುತ್ತ

ಲೇಖನ ಬೋಧಪ್ರದವಾಗಿತ್ತು. ಕುಳಿತಲ್ಲಿಯೇ ಚಂದ್ರಯಾನ ಮಾಡಿಸಿದಂತಾಯ್ತು.

–ಬಿ. ಮಂಜಪ್ಪ ಬೆಂಗಳೂರು / ಬಿ. ಎಸ್. ಸುಹಾಸ, ಹಾವೇರಿ

## ವಿಕೃತ ಸುಖ!

ನವೆಂಬರ್ 12ರ 'ಸುಧಾ' 'ಸುಖೀಭವ' ಅಂಕಣದಲ್ಲಿ ನಿವೃತ್ತ ಸರ್ಕಾರಿ ವೈದ್ಯರೊಬ್ಬರು ತಮ್ಮ ವೃತ್ತಿ ಜೀವನದಲ್ಲಿ ಈ ರೀತಿಯ ಸಮಸ್ಯೆಗಳನ್ನು ಎದುರಿಸಿಲ್ಲ ಎಂದು ಹೇಳಿದ್ದಾರೆ! ಇದು ಸ್ವಲ್ಪ ಮಟ್ಟಿಗೆ ಸತ್ಯವಿರಬಹುದು. ಏಕೆಂದರೆ ಈ ರೀತಿಯ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ನೆಪದಲ್ಲಿ ಅಶ್ಲೀಲ ಸಾಹಿತ್ಯವನ್ನು ತೂರಿಸಿ ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸಿಕೊಂಡಿರುವ ಉದಾಹರಣೆಗಳು ಸಾಕಷ್ಟಿವೆ! ಆದರೆ ನಿವೃತ್ತ ವೈದ್ಯರು ಹೇಳಿದ ಹಾಗೆ ಡಾ. ವಿನೋದ ಛೆಬ್ಬಿ ಅವರು ಹುಟ್ಟುಹಾಕಿದ ಕಲ್ಪನೆಗಳಲ್ಲ ಎಂದು ನಿಸ್ಸಂದೇಹವಾಗಿ ಹೇಳಬಹುದು. ಆದರೂ ಈ ಅಂಕಣದ ಸಾಧಕ–ಭಾದಕಗಳ ಬಗ್ಗೆ ಒಂದು ಆರೋಗ್ಯಪೂರ್ಣ ಚರ್ಚೆಯಾಗಲಿ.

–ಜಿ. ವಿಶ್ವನಾಥ, ಗೊಂಡೇದಹಳ್ಳಿ

## ಗಿಬ್ ಸ್ಮರಣೆಗೆ ಆ ಹೆಸರು

ಗಿಬ್ ಹೈಸ್ಕೂಲಿಗೆ ಶತಕ ಸಂಭ್ರಮದ ಪರಿಚಯ ಲೇಖನದಲ್ಲಿ 1911 ರಲ್ಲಿ ಆಗ ಕಾರವಾರದಲ್ಲಿ ದಕ್ಷಿಣ ವಿಭಾಗದ ಕಮೀಷನರ್ ಆಗಿದ್ದ ಎಂ.ಸಿ. ಗಿಬ್ ಅತೀವ ಅಸ್ಥೆ ವಹಿಸಿ ಫ್ರೌಢಶಾಲೆಗೆ ಮಾನ್ಯತೆ ಕೊಡಿಸಿರುವುದರ ಸ್ಮರಣಾರ್ಥ ಗಿಬ್ ಫ್ರೌಢ ಶಾಲೆ ಎಂದು ಹೆಸರು ಬರಲು ಕಾರಣವಾಯಿತು. 1964 ರಲ್ಲಿ ಸದರಿ ಶಾಲೆಯ ಶಿಕ್ಷಕ ಕೆ.ಜಿ. ರಾವ್ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪಡೆಯುವ ಚಿತ್ರದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಇದ್ದಾರೆ. ನೀವು ಅದನ್ನು ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಎಂದು ಹೇಳಿರುವಿರಿ. 1964 ರಲ್ಲಿ ಬಾಬು ರಾಜೇಂದ್ರ ಪ್ರಸಾದ್‌ರವರು ನಿಧನರಾಗಿದ್ದರು.

–ಮೊಳಕಾಲ್ಮುರು ಸುರೇಶ್, ಬಳ್ಳಾರಿ/ ಡಿ.ಎನ್. ಶಾನಭಾಗ, ಬೆಂಗಳೂರು

*(ಹೌದು ತಪ್ಪಾಗಿದೆ–ಸಂ.)*

## ಅದ್ಭುತ

ಎಂ.ಬಿ. ನಾಯ್ಕರ 2050ರ ಕಲ್ಪನೆಯ ಲೋಕ ಅದ್ಭುತವಾಗಿದೆ.

–ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

## ವರ್ಣಮಾಲೆ ಸುಧಾರಣೆ ಬೇಕು

ನವೆಂಬರ್ 5ರ ಸುಧಾದಲ್ಲಿ ಲಿಂಗದೇವರು ಹಳೆಮನೆ 'ಕನ್ನಡ ಅಕ್ಷರ ಮಾಲೆಗೆ ಕತ್ತರಿ ಹಾಕಬೇಕೆ' ಲೇಖನಕ್ಕೆ ಪ್ರತಿಕ್ರಿಯೆ..

ಕನ್ನಡದ ವರ್ಣಮಾಲೆ ಸುಧಾರಣೆ ಈಗ ಸೂಕ್ತವೆನಿಸುತ್ತದೆ, ಈ ಬಗ್ಗೆ ಸಾರ್ವಜನಿಕ ಚರ್ಚೆ, ಸಲಹೆ, ಸೂಚನೆಗಳಿಗೆ ಬೇಕಾದಷ್ಟು ಅವಕಾಶವಿದೆ.

ಸ್ವರಗಳು ಅ–ಔ ಕಾರದವರೆಗೆ ಒಟ್ಟು 14 ಇವೆ. ಇದರಲ್ಲಿ ಋ ೠ ಗಳನ್ನು ತೆಗೆದು ಹಾಕಿದರೆ ಯಾವ ವ್ಯವಹಾರಕ್ಕೂ ತೊಂದರೆ ಇಲ್ಲ. ಉಳಿದ 12 ಅಕ್ಷರಗಳಲ್ಲಿ ಮುಖ್ಯವಾದದ್ದೆಂದರೆ ಎರಡು ಭಾಗ– ಹೃಸ್ವ ಮತ್ತು ದೀರ್ಘ. ದೀರ್ಘಕ್ಕೆ ಹೃಸ್ವದ ಕೆಳಗೆ ಒಂದು ಚಿಹ್ನೆ ಕೊಟ್ಟರೆ ಸಾಕು. ಅಲ್ಲಿಗೆ 5 ಅಕ್ಷರಗಳು ಕಡಿಮೆಯಾಗುತ್ತವೆ. ಇನ್ನು ಇಳಿ, ಕೊಂಬು, ಗುಡಿಸಿನ ಸೇರಿದಂತೆ ಒಟ್ಟು 3 ದೀರ್ಘ ಇವೆ. ಇದರಲ್ಲಿ ಗುಡಿಸಿನ ದೀರ್ಘ ಮಾತ್ರ ಉಳಿಸಿಕೊಂಡರೆ ಸಾಕು. ಆಗ ಸ್ವರಗಳು 7 ಮಾತ್ರ ಆಗುತ್ತವೆ. ಇದರಿಂದ ಏನೂ ಅನಾಹುತವಾಗುವುದಿಲ್ಲ.

ಆಗ – ಅ ಅೀ ; ಇ ಇೀ ; ಉ ಉೀ

ಎ ಎೀ ; ಐ ಒ ಒೀ ಔ ಇರಲಿ.

ಅೀಡು, ಇೀಗ, ಉೀ ರು

ಎೀತ, ಓೀಟ, ಹೀಗೆ ಬರೆಯಬಹುದಲ್ಲ?

ವ್ಯಂಜನಗಳು ವರ್ಗೀಯ 25, ಅವರ್ಗೀಯ 9, ವರ್ಗೀಯ ಇದರಲ್ಲಿ ಅಲ್ಪಪ್ರಾಣ, ಮಹಾಪ್ರಾಣ ಮತ್ತು ಅನುನಾಸಿಕ.

ನಾವು ಈಗಾಗಲೇ ಒಪ್ಪಿಕೊಂಡಿರುವಂತೆ ಡ ಢ, ದ ಧ ಇವುಗಳಂತೆ ಇತರ ಎಲ್ಲಾ ಮಹಾ ಪ್ರಾಣಗಳನ್ನೂ ಬರೆಯಬಾರದೇಕೆ?

ಟ ಢ ಡ ಢ ಣ

ಡ ಥ ದ ಧ ನ

ಪ ಫ ಬ ಭ ಮ

ಇದರಿಂದ 6 ಅಕ್ಷರ ಕಲಿಯುವ ಕಷ್ಟ ತಪ್ಪುತ್ತದೆ. ಅಲ್ಲಿಗೆ 11 ಅಕ್ಷರ ವಜಾ ಆದಂತಾಯ್ತು.

ಅವರ್ಗೀಯದಲ್ಲಿ ಷ ಕೈಬಿಟ್ಟು ಯ, ರ, ಲ, ವ, ಶ, ಸ, ಹ, ಳ ಬಳಸಿದರೆ ಸಾಕು.

ಇದರಿಂದ ಸ್ವರ 9

ವ್ಯಂಜನ (ವರ್ಗೀಯ) 13

ಅವರ್ಗೀಯ 8

ಒಟ್ಟು 30 ಅಕ್ಷರಗಳನ್ನು ಕಲಿತರಾಯ್ತು.

–ಅ.ರಾ. ಶಂಕರಯ್ಯ, ದಾವಣಗೆರೆ

## ಅಕ್ಷರಮಾಲೆಗೆ ಕತ್ತರಿ ಯಾಕೆ?

ಕನ್ನಡ ಭಾಷೆ ಸಂಸ್ಕೃತ, ಪ್ರಾಕೃತ, ಪರ್ಶಿಯನ್, ಉರ್ದು, ಇಂಗ್ಲಿಷ್ ಭಾಷೆಗಳ ಸಾವಿರಾರು ಶಬ್ದಗಳನ್ನು ತನ್ನ ಒಡಲೊಳಗೆ ಅರಗಿಸಿಕೊಂಡು ಶ್ರೀಮಂತವಾಗಿ ಬೆಳೆದಿದೆ. ಈ ಶಬ್ದಗಳ ಬರವಣಿಗೆಗೆ ಮಹಾಪ್ರಾಣಗಳು ಬೇಕೇ ಬೇಕು. ಮಹಾಪ್ರಾಣಗಳ ಉಚ್ಚರಣೆಗಳು ಕನ್ನಡದ ಜಾಯಮಾನಕ್ಕೆ ಒಗ್ಗುವದಿಲ್ಲವೆಂಬ ವಾದವಂತೂ ಅರ್ಥಹೀನ. ಹಾಗಿದ್ದರೆ ರನ್ನ, ರಾಘವಾಂಕ, ಹರಿಹರರಂಥ ಕವಿಗಳ ಮಹಾಕಾವ್ಯಗಳು ಹೇಗೆ ಜನಪ್ರಿಯವಾದವು? ಮಹಾಪ್ರಾಣಗಳ ಉಚ್ಚರಣೆ ಕನ್ನಡ ನುಡಿಯ ಸೊಬಗನ್ನು ಖಂಡಿತವಾಗಿಯೂ ಹೆಚ್ಚಿಸಿದೆ. ವಿದ್ವಾಂಸರ ಮುಕ್ತಿ ವಾದಗಳಿಗಿಂತ ಕನ್ನಡಿಗರ ನುಡಿ–ನಾಲಗೆಗಳಿಗನುಗುಣವಾಗಿ ಅಕ್ಷರಮಾಲೆ ಇರಲಿ.

ಯಾವುದೋ ಒಂದು ಕಾಲದಲ್ಲಿ, ಸಮಾಜದ ಯಾವುದೋ ಒಂದು ವರ್ಗವು ಮಹಾಪ್ರಾಣಗಳ ಉಚ್ಚರಣೆಯ ಕೌಶಲ್ಯವನ್ನು ಜಿಹ್ವಾಗತಗಳಿಸಿಕೊಂಡಿರಲಿಕ್ಕಿಲ್ಲ. ಅದಕ್ಕೆ ಕಾರಣಗಳು ಹಲವಿರಬಹುದು. ಶಿಕ್ಷಣ ಸೌಲಭ್ಯಗಳಿಂದ ವಂಚಿತರಾಗಿರುವುದು, ಗ್ರಾಮೀಣ ಹಿನ್ನೆಲೆ, ದೇಹ ದುಡಿಮೆ, ಸಾಂಸ್ಕೃತಿಕ ವಾತಾವರಣದ ಅಲಭ್ಯತೆ– ಇತ್ಯಾದಿ, ಆದರೆ ಇಂದು ಕನ್ನಡನಾಡಿನ ಎಲ್ಲ ಜಾತಿ–ಜನಾಂಗಳೂ ಸಂಸ್ಕೃತಿ, ವಿದ್ಯೆ, ಭಾಷಾ ಪ್ರೌಢಿಮೆಗಳನ್ನು ದೇಶ ವಿದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ದೊರಕಿಸಿಕೊಳ್ಳುತ್ತಿಲ್ಲವೇ? ಕನ್ನಡದ ಮಹಾಪ್ರಾಣಗಳಿರಲಿ, ಇಂಗ್ಲಿಷ್ ಭಾಷೆಯನ್ನೇ– ಅದರ ಎಲ್ಲಾ ಉಚ್ಚರಣೆಗಳ ವಕ್ರತೆಗೊಳೊಂದಿಗೆ– ನಾವು ಇಡಿಯಾಗಿ ನುಂಗಿ ರೂಢಿಸಿಕೊಂಡಿಲ್ಲವೇ? ಶ್ರೀ ಸಾಮಾನ್ಯನ ಸಹಜ ಜಾಣ್ಮೆಯ ಆವಿಷ್ಕಾರಗಳ ಮೇಲೆ ಗಮನ ಹರಿಸಿ ತನ್ನ ಅಧಿಕೃತ ಮುದ್ರೆಯನ್ನೊತ್ತಲು ಭಾಷಾ ವಿಜ್ಞಾನಿ ಸಿದ್ಧನಿಲ್ಲ. ಆತನಿನ್ನೂ ವ್ಯಾಕರಣವೆಂಬ ಗಾಳಿಯಂತ್ರದ ಮಹಾಪ್ರಾಣಗಳೆಂಬ 'ನಿರುಪಯುಕ್ತ' ರೆಕ್ಕೆಗಳ ಮೇಲೆ ತನ್ನ ಕತ್ತಿಯನ್ನು ಗುರಿಯಿಡುವುದರಲ್ಲಿ ನಿರತನಾಗಿದ್ದಾನೆ!

–ವ್ಯಾಸ ದೇಶಪಾಂಡೆ, ಹುಬ್ಬಳ್ಳಿ

### 'ನೆಟ್'ನಿಂದ ಹಾರಿಸಿದ್ದು....

★ಒಂದು ಮಗುವನ್ನು ಹೊಂದಿದ್ದರೆ ಪಾಲಕರಾಗುವಿರಿ.
ಎರಡು ಮಕ್ಕಳನ್ನು ಹೊಂದಿದ್ದರೆ ತೀರ್ಪುಗಾರರಾಗುವಿರಿ.

★ಮದುವೆ ಎನ್ನುವ ಸಂಬಂಧದಲ್ಲಿ ಒಬ್ಬರದ್ದೇ ಯಾವಾಗಲೂ ಸರಿ. ಇನ್ನೊಂದು ಕಡೆ ಇರುವುದು ಪತಿ!

★ತೆರಿಗೆಯನ್ನು ನಗುಮುಖದಿಂದ ಕಟ್ಟಬೇಕು ಎಂಬುದನ್ನು ನಂಬುತ್ತೇನೆ,
ಅದಕ್ಕಾಗಿ ಪ್ರಯತ್ನಿಸುತ್ತೇನೆ ಕೂಡ. ಆದರೆ ಅವರು ಹಣ ಕೇಳುತ್ತಾರೆ.

★ಉಳಿತಾಯ ಮಾಡುವುದು ಒಳ್ಳೆಯ ಕೆಲಸ. ವಿಶೇಷವಾಗಿ ನಿಮ್ಮ ಪಾಲಕರು ನಿಮಗಾಗಿ ಅದನ್ನು ಮಾಡಿದ್ದರೆ..

★ನೀವು ಬದುಕಲು ಬಯಸುವ ವ್ಯಕ್ತಿಯೊಂದಿಗೆ ಮದುವೆಯಾಗಬೇಡಿ. ಯಾರೊಂದಿಗೆ ಬದುಕಲು ಇಚ್ಛಿಸುವುದಿಲ್ಲವೋ ಅಂಥವರೊಂದಿಗೆ ಮದುವೆಯಾಗಿ. ನೀವೇನೇ ಮಾಡಿದರೂ ನಂತರ ಪಶ್ಚಾತ್ತಾಪ ಪಟ್ಟೇ ಪಡುತ್ತೀರಿ.

★ಜಾಣರು ಮಾತನಾಡುತ್ತಾರೆ, ಯಾಕೆಂದರೆ ಅವರಿಗೆ ಏನಾದರೂ ಹೇಳಲು ಇರುತ್ತದೆ. ಮೂರ್ಖರೂ ಮಾತನಾಡುತ್ತಾರೆ. ಏಕೆಂದರೆ ಅವರಿಗೂ ಏನೋ ಹೇಳುವುದಿರುತ್ತದೆ.